## ಪ್ರ.ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ

**(ಸಂಚಾರಿ ನ್ಯಾಯಾಲಯ ಅಜ್ಜಂಪುರ)**

**ಸಿ.ಸಿ ಸಂಖ್ಯೆ ::416/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ದೇವರಾಜ | **PW-9** |
| **ತಂದೆಯ ಹೆಸರು** | : | ಗವಿರಂಗಪ್ಪ | **CW-19** |
| **ವಯಸ್ಸು** | : | 66 ವರ್ಷ | |
| **ಉದ್ಯೋಗ** | : | ನಿವೃತ್ತ ಪಿ ಐ | |
| **ವಾಸಸ್ಥಳ** | : | ಚಿಕ್ಕಮಗಳೂರು | |

**ದಿನಾಂಕಃ20-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನಾನು 2016 ರಿಂದ 2017 ರವರೆಗೆ ತರೀಕೆರೆ ವೃತ್ತದ ವೃತ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ನಾನು ದಿಃ 28.07.2017 ರಂದು ಚಾಸಾ 17 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ. ಅದೇ ದಿನ ಮೃತನ ಹೆಂಡತಿಯಾದ ರಂಗಮ್ಮ/ಚಾಸಾ8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 2 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ 2 ರಿಂದ 4 ರವರು ನನ್ನ ಸಮಕ್ಷಮ ನಿಪಿ3 ರಿಂದ 5 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ಅದೇ ದಿನ ಬೆಳಗ್ಗೆ 11.30 ರಿಂದ 12.00 ಗಂಟೆ ನಡುವೆ ನಿಪಿ6 ರಂತೆ ಚಾಸಾ 13 ಮತ್ತು 14 ರವರ ಸಮಕ್ಷಮ ಕೆ ಎ 18 ಎ 8611

ನೋಂದಣಿ ಸಂಖ್ಯೆಯ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ದಿಃ 30.01.2017 ರಂದು ಚಾಸಾ 5 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ26.02.2017 ರಂದು ಪ್ರಕರಣದ ಆರೋಪಿ ರವರು ಠಾಣೆಗೆ ಹಾಜರಾದ ಮೇರೆಗೆ ನ್ಯಾಯಾಲಯದ ಆದೇಶದಂಶೆ ಮುಚ್ಚಳಿಕೆ ಪಡೆದು ಅವರನ್ನು ತನಿಖೆಗೆ ಸಹಕರಿಸುವಂತೆ ಹೇಳಿ ಬಿಡುಗಡೆ ಮಾಡಿರುತ್ತೇನೆ. ದಿಃ 25.03.2017 ರಂದು ಆರ್ ಟಿ ಓ ರವರಿಗೆ ಅಪಘಾತಕ್ಕೀಡಾದ ವಾಹನದ ಎಂ ವಿ ವರದಿ ಕೋರಿದ್ದು ಅವರು ನೀಡಿದ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ9 ಎಂದು ಹಾಗೂ ಸಹಿಯನ್ನು ನಿಪಿ9 ಎ ಎಂದು ಗುರುತಿಸಲಾಯಿತು. ಅಪಘಾತಕ್ಕೀಡಾದ ವಾಹನವನ್ನು ಅದರ ಮಲೀಕರಿಗೆ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ.

ನಂತರ ಪ್ರಕರಣದ ಕಡತವನ್ನು ಚಾಸಾ 20 ರವರಿಗೆ ಹಸ್ತಾಂತರಿಸಿರುತ್ತೇನೆ. ನಾನು ಆರೋಪ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಗುರುತಿಸಿರುತ್ತಾರೆ.

**:: ಪಾಟೀ ಸವಾಲು :: ಆರೋಪಿತರ ಪರ ಶ್ರೀ.KRG ವಕೀಲರಿಂದ ::**

ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕೋಸ್ಕರ ಸುಳ್ಳು ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಎಂ ವಿ ವರದಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರಿಂದ 5 ರವರ ಹೇಳಿಕೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: